ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ

## ಜೈನ್ ವಿವಿ ಕ್ರೀಡಾ ಹಬ್ಬ 2ನೇ ದಿನ

# ಆತಿಥೇಯ ಜೈನ್ ವಿವಿ ಪಾರಮ್ಯ




**ದಿಗಂತ ವರದಿ: ಬೆಂಗಳೂರು, ಫೆ.17**

ಜಯನಗರದ ಮಾದವನ್ ಪಾರ್ಕ್‌ನಲ್ಲಿ ನಡೆಯುತ್ತಿರುವ ಜೈನ್ ವಿಶ್ವವಿದ್ಯಾನಿಲಯದ 15 ನೇ ವಾರ್ಷಿಕ ಅಖಿಲ ಭಾರತೀಯ ಮಟ್ಟದ ಕ್ರೀಡಾ ಹಬ್ಬದ 2 ನೇ ದಿನ ವಿವಿಧ ತಂಡದ ಕ್ರೀಡಾಪಟುಗಳು ಉತ್ಸಾಹದಿಂದ ಭಾಗವಹಿಸಿದರು.

ಆತಿಥೇಯ ಜೈನ್ ವಿವಿ ಮಹಿಳಾ ಬಾಸ್ಕೆಟ್‌ಬಾಲ್ ಮೊದಲ ಪಂದ್ಯದಲ್ಲಿ ಕ್ರಿಸ್ತು ಜಯಂತಿ ಬೆಂಗಳೂರು ಕಾಲೇಜು ತಂಡವನ್ನು ಸೋಲಿಸಿ ಮುಂದಿನ ಸುತ್ತು ಪ್ರವೇಶಿಸಿದೆ. ಪುರುಷರ ಬಾಸ್ಕೆಟ್‌ಬಾಲ್ ಪಂದ್ಯದಲ್ಲೂ ಆತಿಥೇಯ ತಂಡ ಎರಡನೇ ಪ್ರವೇಶಿಸುವಲ್ಲಿ ಯಶಸ್ವಿಯಾಗಿದೆ.

ವಿಜಿಇ 15 ನೇ ಆವೃತ್ತಿಯಲ್ಲಿ ವಿವಿಧ ಕಾಲೇಜುಗಳ 1000 ಕ್ಕೂ ಅಧಿಕ ಕ್ರೀಡಾಪಟುಗಳು ಭಾಗವಹಿಸಿದ್ದರು. 4 ದಿನಗಳ ಕ್ರೀಡಾಕೂಟದಲ್ಲಿ ದೇಶದ ಅಗ್ರ ಹೆಸರಾಂತ ಕಾಲೇಜುಗಳು ಪಾಲ್ಗೊಂಡಿವೆ. ಮದ್ರಾಸ್ ಕ್ರಿಶ್ಚಿಯನ್ ಕಾಲೇಜು, ಹಿಂದೂಸ್ತಾನ್ ವಿಶ್ವವಿದ್ಯಾನಿಲಯ, ಡಿಬಿ ಜೈನ್ ಕಾಲೇಜು , ಎಂಒಪಿ ವೈಷ್ಣವ್ ಕಾಲೇಜು , ಗುರುನಾನಕ್ ಕಾಲೇಜು , ಪಿಎಸ್‌ಜಿ ಕಲಾ ಹಾಗೂ ವಿಜ್ಞಾನ ಕಾಲೇಜು , ಕ್ರೈಸ್ಟ್ ವಿಶ್ವವಿದ್ಯಾನಿಲಯ, ಸುರಾನ ಕಾಲೇಜು , ಸೇಂಟ್ ಜೋಸೆಫ್ ವಾಣಿಜ್ಯ ಕಾಲೇಜು , ಶ್ರೀಲಂಕಾದ ಆರ್‌ವಿ ಎಂಜೀನಿಯರಿಂಗ್ ಹಾಗೂ ಇಸಿಪಥಾನ ಕಾಲೇಜು ತಂಡಗಳು ಪ್ರಮುಖ ಆಕರ್ಷಣೆಯಾಗಿದ್ದವು.